# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ


ಸಂ: ಅ.ಅ.(ಪ)/ಕಾ.ಆ/ಪಿಆರ್/ 14 /12-13

ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಕಛೇರಿ,
ಭಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20
ದಿನಾಂಕ: 25-07-2012

## ಕಾರ್ಯಾದೇಶ

ವಿಷಯ : ವಾರ್ಡ್ ಸಂಖ್ಯೆ: 137ರಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಣೆ ಮಾಡಲು ಒಂದು ಆಟೋವನ್ನು ಪರ್ಯಾಯವಾಗಿ (ಬದಲಿ) ನಿಯೋಜಿಸುವ ಬಗ್ಗೆ.

ಉಲ್ಲೇಖ:
1. ಆರೋಗ್ಯ ವೈದ್ಯಾಧಿಕಾರಿ (ಜೆ.ಜೆ.ಆರ್.ನಗರ)ವಲಯ ರವರ ಕಾರ್ಯಾದೇಶ ಸಂಖ್ಯೆ: ಆ.ವೈ(ಜೆ.ಜೆ.ಆರ್.ನಗರ)ಇಸಿಪಿಆರ್: 97 /07-08, ದಿನಾಂಕ: 27-08-2007
2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜೆ.ಜೆ.ಆರ್.ನಗರ)ರವರ ವರದಿ.
3. ಅಪರ ಆಯುಕ್ತರು (ಪಶ್ಚಿಮ)ರವರ ದಿನಾಂಕ: 19-07-2012ರ ಅದೇಶ.

*******

ಜಗಜೀವನರಾಮನಗರ ಉಪ-ವಿಭಾಗದ ವಾರ್ಡ್ ಸಂಖ್ಯೆ: 137ರಲ್ಲಿ ಕಸ ಸಂಗ್ರಹಣೆ ಕೆಲಸ ನಿರ್ವಹಿಸಲು ಗುತ್ತಿಗೆದಾರರಾದ ಉಲ್ಲೇಖ (1)ರಂತೆ ಶ್ರೀಮತಿ. ಪದ್ಮಾವತಿ ರವರಿಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಕಾರ್ಯಾದೇಶ ನೀಡಲಾಗಿತ್ತು, ಆದರೆ ಸದರಿ ಗುತ್ತಿಗೆದಾರರು ಅಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆಂಬ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಗಜೀವನರಾಮನಗರ ಉಪ-ವಿಭಾಗರವರ ವರದಿಯನ್ವಯ ರದ್ದತಿ ಮಾಡಲು ಕೋರಿರುವ ಮೇರೆಗೆ ಸದರಿ ಕಾರ್ಯಾದೇಶವನ್ನು ರದ್ದುಮಾಡಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ದೃಷ್ಠಿಯಿಂದ ಪರ್ಯಾಯವಾಗಿ (ಬದಲಿಗೆ) ಪೌರಕಾರ್ಮಿಕರ ಅವಲಂಭಿತರಾದ ಶ್ರೀ. ಸದಾನಂದ ಎ ರವರ ಆಟೋ ಸಂಖ್ಯೆ: ಕೆಎ-02-ಬಿ-7277 ಅನ್ನು ನಿಯೋಜಿಸಿಕೊಂಡು, ಒಂದು ಆಟೋಗೆ ರೂ. 16,000/-ಗಳನ್ನು (ಹದಿನಾರು ಸಾವಿರ ರೂಪಾಯಿಗಳು ಮಾತ್ರ) ನಿಗಧಿಪಡಿಸಿ, ಸದರಿ ಗುತ್ತಿಗೆದಾರರಿಗೆ ತಾತ್ಕಾಲಿಕವಾಗಿ ಅಪರ ಆಯುಕ್ತರು (ಪಶ್ಚಿಮ)ರವರ ಆದೇಶದಂತೆ ದಿನಾಂಕ: 01-08-2012 ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ಅಥವಾ ಟೆಂಡರ್ ಕರೆಯುವವರೆಗೆ ಈ ಕೆಳಕಂಡ ಷರತ್ತಿನೊಂದಿಗೆ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸಲು ನಿಯೋಜಿಸಿ ಆದೇಶಿಸಲಾಗಿದೆ. ಇದೊಂದು ಪರ್ಯಾಯ (ಬದಲಿ) ವ್ಯವಸ್ಥೆಯಾಗಿದ್ದು, ಹೆಚ್ಚಿನ ಆರ್ಥಿಕ ಹೊರೆ ಇರುವುದಿಲ್ಲ.

### ಷರತ್ತುಗಳು

1. ಗುತ್ತಿಗೆದಾರನ್ನು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಟ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.
2. ಕೆಲಸದ ಸಮಯದ ಬಗೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಪರಿಸರ ಅಧಿಕಾರಿ ಜಗಜೀವನರಾಮನಗರ ಉಪ - ವಿಭಾಗ ರವರ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು.
3. ಕೇವಲ ಪುರುಷ ಕೆಲಸಗಾರರನ್ನು ಮಾತ್ರ ನೇಮಿಸತಕ್ಕದ್ದು.
4. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.

ಮು.ತಿ.ನೋ...

5. ಸ್ವಚತಾ ಕೆಲಸಕ್ಕೆ ಆಟೋ (ಮಿನಿಡಾರ್) ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಕಟಾವ ಮಾಡಲಾಗುವುದು.
6. ಸಾರ್ವಜನಿಕರಲ್ಲಿ ಯಾವುದೇ ದೂರು ಬರದಂತೆ ನೋಡಿಕೊಳ್ಳುವುದು.
7. ವಾಹನದ ಮುಂದೆ ವಾಹನದ ಸಂಖ್ಯೆ: ವಾರ್ಡ್ ಸಂಖ್ಯೆ ಹಾಗೂ ವಲಯದ ಹೆಸರು ಹಾಗೂ ಬಿ.ಬಿ.ಎಂ.ಪಿ. ಸೇವೆಯ ಕಸ ಸಾಗಾಣಿಕೆ ಆಟೋ ಎಂದು ಮುಂದುಗಡೆ ಕಡ್ಡಾಯವಾಗಿ ಬರೆಯಬೇಕು.
8. ಪ್ರತಿನಿತ್ಯ ಈ ವಾರ್ಡಿನಲ್ಲಿ ಉತ್ಪಾದನೆಯಾಗುವ ಮನೆ ಮನೆಯಿಂದ ಘನತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಸಾಗಿಸತಕ್ಕದ್ದು.
9. ಕೆಲಸ ನಿರ್ವಹಿಸುವ ಪೂರ್ಣ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ.
10. ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಗುತ್ತಿಗೆದಾರರನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗಿರುವುದು.
11. ಕೆಲಸ ನಿರ್ವಹಿಸುವ ಪ್ರದೇಶವನ್ನು / ರಸ್ತೆಗಳ ವಿವರಗಳನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಪರಿಸರ ಅಧಿಕಾರಿ ಜಗಜೀವನರಾಮನಗರ ಉಪ- ವಿಭಾಗ ರವರಿಂದ ಪಡೆಯತಕ್ಕದು ಹಾಗೂ ಅವರ ಆದೇಶ ಮತ್ತು ಮೇಲಾಧಿಕಾರಿಗಳ ಆದೇಶದಂತೆ ಕೆಲಸ ನಿರ್ವಹಿಸುವುದು.

ಅಧೀಕ್ಷಕ ಅಭಿಯಂತರರು (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಶ್ರೀ. ಸದಾನಂದ ಎ
ನಂ. 34, 1ನೇ ಮುಖ್ಯರಸ್ತೆ, ಪಿ.ಕೆ. ಕ್ವಾಟ್ರಸ್,
ವಿ.ಎಸ್. ಗಾರ್ಡನ್ಸ್, ಜೆ.ಜೆ.ಆರ್.ನಗರ,
ಬೆಂಗಳೂರು – 560 023

ಪ್ರತಿಯನ್ನು:

- ಅಪರ ಆಯುಕ್ತರು(ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
- ಸಹಾಯಕ ಹಣಕಾಸು ನಿಯಂತ್ರಕರು (ಪಶ್ಚಿಮ) ರವರ ಮಾಹಿತಿಗಾಗಿ ರವಾನಿಸಿದೆ.
- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಪರಿಸರ ಅಧಿಕಾರಿ, ಜಗಜೀವನರಾಮನಗರ ಉಪ-ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಅ(ಚಾ.ಪೇ)ಪಿಆರ್/ 199 /14-15

ಕಾರ್ಯಪಾಲಕ ಅಭಿಯಂತರರವರ ಕಛೇರಿ
ಚಾಮರಾಜಪೇಟೆ ವಿಭಾಗ,
ಬಿ.ಬಿ.ಎಂ.ಪಿ.ವಾಣಿಜ್ಯ ಸಂಕೀರ್ಣ,
ಜೆ.ಸಿ. ರಸ್ತೆ, 2ನೇ ಮಹಡಿ,
ಬೆಂಗಳೂರು-02, ದಿನಾಂಕ: 4-8-14

## "ಸರಬರಾಜು ಆದೇಶ"

ವಿಷಯ: ಪಶ್ಚಿಮ ವಲಯದ ಜೆ.ಜೆ.ಆರ್.ನಗರ ಉಪವಿಭಾಗ ವ್ಯಾಪ್ತಿಯಲ್ಲಿರುವ ವಾರ್ಡ್ ಸಂಖ್ಯೆ:137 ರಾಯಪುರಂ ಪ್ರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಪೌರಕಾರ್ಮಿಕರು ಮತ್ತು ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ:
1) ಜಂಟಿ ಆಯುಕ್ತರು (ಘನತ್ಯಾಜ್ಯ),ಬಿಬಿಎಂಪಿ, ಬೆಂ ಇವರ ಶಿಫಾರಸ್ಸಿನ ಸಂಖ್ಯೆ: ಕಂಡಿಕೆ (42) ಮತ್ತು (43) ಹಾಗೂ ಪತ್ರದ ಸಂಖ್ಯೆ:ಎಫ್-365/14-15, ದಿ:01-07-2014
2) ಮಾನ್ಯ ಆಯುಕ್ತರವರ ಕಂಡಿಕೆ (45)ರ ಅನುಮೋದನೆ ಸಂಖ್ಯೆ: (G)2834/14-15, ದಿನಾಂಕ:11-07-2014ರ ಆದೇಶದಂತೆ.
3) ವಿಶೇಷ ಆಯುಕ್ತರು (ಘನತ್ಯಾಜ್ಯ), ಬಿಬಿಎಂಪಿ, ಬೆಂ, ರವರ ಕಂಡಿಕೆ 44ರ ಅನುಮೋದನೆ ದಿನಾಂಕ:09-07-2014
4) ಜಂಟಿ ಆಯುಕ್ತರು (ಘನತ್ಯಾಜ್ಯ) ಪ್ಯಾರ 48 ಮತ್ತು 49 ರಲ್ಲಿ ಸಂಖ್ಯೆ: ಎಫ್-485/14-15, ದಿನಾಂಕ:14-07-2014
5) ಜಂಟಿ ಆಯುಕ್ತರು (ಪಶ್ಚಿಮ) ಪ್ಯಾರ 67 ರಲ್ಲಿ ಸಂಖ್ಯೆ: ಎಫ್-2973/14-15, ದಿನಾಂಕ:04-08-2014

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಜೆ.ಜೆ.ಆರ್.ನಗರ ಉಪ ವಿಭಾಗ ವ್ಯಾಪ್ತಿಯಲ್ಲಿರುವ ವಾರ್ಡ್ ಸಂಖ್ಯೆ:137 ರಾಯಪುರಂ ಪ್ರದೇಶಗಳಲ್ಲಿ ಇಲಾಖೆಯ ಪತಿಯಿಂದ ಘನತ್ಯಾಜ್ಯ ನಿರ್ವಹಣೆ (ಸಂಗ್ರಹಣೆ ಮತ್ತು ವಿಲೇವಾರಿ) ಕಾರ್ಯ ನಿರ್ವಹಿಸಲು ಪೌರಕಾರ್ಮಿಕರು ಮತ್ತು ವಾಹನಗಳನ್ನು ಸರಬರಾಜು ಮಾಡಲು ಪ್ರತಿ ಮಾಹೆಗೆ "Mathashree Clean and Green" ರವರು ರೂ.**22,66,388/-** (ರೂ.ಇಪ್ಪತ್ತೆರಡು ಲಕ್ಷದ ಅರವತ್ತಾರು ಸಾವಿರದ ಮೂರು ನೂರ ಎಂಬತ್ತೆಂಟು ಮಾತ್ರ) ಗಳಿಗೆ ಸರಬರಾಜು ಮಾಡಲು ಒಪ್ಪಿರುತ್ತಾರೆ. ಸದರಿ ದರಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಅದರಂತೆ ದಿನಾಂಕ:**01-05-2014** ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೂ ಈ ಕೆಳಕಂಡ ಷರತ್ತುಗಳನ್ವಯ ಅಗತ್ಯವಿರುವ ಪೌರಕಾರ್ಮಿಕರು ಮತ್ತು ವಾಹನಗಳನ್ನು ಸರಬರಾಜು ಮಾಡಲು ಸರಬರಾಜು ಆದೇಶ ನೀಡಲಾಗಿದೆ.

### ವಾರ್ಡ್ ಸಂಖ್ಯೆ:137 ರಾಯಪುರಂ

| Sl No | Description of Item | Unit | Quantity | Rate per unit in Rs. | Table Cost in Rs. |
|---|---|---|---|---|---|
| | | | Ward No 137 | | |
| 1) | Push Cart with helper | Nos | 7 | 10331.20 | 72,318.40 |
| 2) | Pourakarmika's for Street Sweeping | Nos | 97 | 10593.20 | 10,27,540.40 |
| 3) | Pourakarmika's with Pushcart for Open area Cleaning | Nos | 44 | 10220.53 | 4,49,703.32 |
| 4) | Auto Tipper with Driver and one helper | Nos | 10 | 30513.40 | 3,05,134.00 |
| 5) | Compactor with one driver and one helper | Nos | 2 | 123946.40 | 2,47,892.80 |
| 6) | Tipper Lorry with Driver and Four Helper | Nos | 1 | 98482.00 | 98,482.00 |
| 7) | Supervisors | Nos | 6 | 10886.20 | 65,317.20 |
| | TOTAL | | | | **22,66,388.12** |

**ಷರತ್ತುಗಳು:**

1) ಸರಬರಾಜು ಆದೇಶ ತಲುಪಿದ ಒಂದು ವಾರದೊಳಗಾಗಿ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ, ಪಿ.ಎಫ್ ವಾಹನಗಳ ನೊಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು ಹಾಗೂ ಪ್ರತಿ ಮಾಹೆ ಇ.ಎಸ್.ಐ ಮತ್ತು ಪಿ. ಪಾವತಿಸಿ ದಾಖಲಾತಿ ಒದಗಿಸುವುದು.
2) ಸರಬರಾಜುಗೊಳಿಸುವ ಪೌರಕಾರ್ಮಿಕರ ಜೊತೆಯಲ್ಲಿ ಅವಶ್ಯವಿರುವ ಸಲಕರಣೆಗಳನ್ನು ನೀಡುವುದು.
3) ನೀವು ಸರಬರಾಜುಗೊಳಿಸುವ ಪೌರಕಾರ್ಮಿಕರನ್ನು ಯಾವುದೇ ಕಾರಣಕ್ಕೆ ಬಿ.ಬಿ.ಎಂ.ಪಿ ನೌಕರರೆಂದು ಪರಿಗಣಿಸತಕ್ಕದ್ದಲ್ಲ.
4) ನೀವು ಸರಬರಾಜುಗೊಳಿಸಿದ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗೂ ಸದರಿ ವಾಹನಗಳು ಉಸ್ತುವಾರಿಯ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ.
5) ಘನತ್ಯಾಜ್ಯವನ್ನು ಮೂಲದಲ್ಲೇ (ಹಸಿ ಕಸ/ಒಣ ಕಸವನ್ನಾಗಿ)ಬೇರ್ಪಡಿಸಿ ವಿಲೇವಾರಿ ಮಾಡುವುದು.
6) ಒಣತ್ಯಾಜ್ಯವನ್ನು ಒಣತ್ಯಾಜ್ಯ ಘಟಕಕ್ಕೆ ಕಡ್ಡಾಯವಾಗಿ ನೀಡುವುದು.

ಕಾರ್ಯಪಾಲಕ ಅಭಿಯಂತರರು
ಚಾಮರಾಜಪೇಟೆ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ:

**Mathashree Clean and Green,**
**#.6/13, 17th cross, V.S.Garden,**
**Bangalore- 560 023.**

**ಪ್ರತಿಯನ್ನು:**

1. ಮಾನ್ಯ ಆಯುಕ್ತರು, ಬಿಬಿಎಂಪಿ, ರವರ ಆಪ್ತ ಕಾರ್ಯಾಲಯಕ್ಕೆ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ವಿಶೇಶ ಆಯುಕ್ತರು(ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ), ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು(ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ), ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಅಪರ/ಜಂಟಿ ಆಯುಕ್ತರು(ಪಶ್ಚಿಮ ವಲಯ), ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು(ಪಶ್ಚಿಮ) ವಲಯ ರವರ ಅವಗಾಹನಗೆ ಸಲ್ಲಿಸಿದೆ.
6. ಸಹಾಯಕ ನಿಯಂತ್ರಕರು(ಹಣಕಾಸು) ಪಶ್ಚಿಮ ವಲಯ ರವರ ಅವಗಾಹನಗೆ ಸಲ್ಲಿಸಿದೆ.
7. ಸಹಾಯಕ ಕಾರ್ಯಾನಿರ್ವಾಹಕ ಅಭಿಯಂತರರು, ಜಗಜೀವನರಾಂನಗರ ಉಪ ವಿಭಾಗರವರಿಗೆ ಕಳುಹಿಸಿದೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಕಡತಕ್ಕೆ.